ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಸುತ್ತೋಲೆ/ಸ.ಪ್ರ.ದ.ಕಾ/ಆಯವ್ಯಯ/11/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:23.08.2022.

ಅತೀ ತುರ್ತು

## ಸುತ್ತೋಲೆ

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2021-22ನೇ ಸಾಲಿನಲ್ಲಿ ಹೆಚ್ಚುವರಿ ಕಾರ್ಯಭಾರಕ್ಕೆ ಅತಿಥಿ ಉಪನ್ಯಾಸಕರಾಗಿ ನೇಮಕಗೊಂಡಿರುವ ಅತಿಥಿ ಉಪನ್ಯಾಸಕರುಗಳಿಗೆ ಆಗಸ್ಟ್-2022ರ ಮಾಹೆಗೆ ಅವಶ್ಯಕವಾಗಿರುವ ಗೌರವಧನವದ ಮಾಹಿತಿಯನ್ನು ನೀಡುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಇಡಿ/242 ಡಿಸಿಇ2021, ದಿನಾಂಕ:14.01.2022 ಮತ್ತು ದಿನಾಂಕ:24.01.2022.
2.ಪತ್ರ ಸಂಖ್ಯೆ: ಕಾಶಿಇ/ನೇವಿ-1/ಅಉಅ/97/2021-22, ದಿನಾಂಕ:17.01.2022, 28.0.2022 & 30.01.2022.

* * * * * * *

ಪ್ರಸ್ತಾಪಿತ ವಿಷಯ ಮತ್ತು ಉಲ್ಲೇಖ(1) & (2)ಕ್ಕೆ ಸಂಬಂಧಿಸಿದಂತೆ, 2021-22ನೇ ಸಾಲಿನಲ್ಲಿ ಹೆಚ್ಚುವರಿ ಕಾರ್ಯಭಾರಕ್ಕೆ ನೇಮಕಗೊಂಡಿರುವ ಅತಿಥಿ ಉಪನ್ಯಾಸಕರುಗಳಿಗೆ ಈಗಾಗಲೇ ಇಲಾಖೆಯ ಇ.ಎಂ.ಐ.ಎಸ್ ತಂತ್ರಾಂಶದಲ್ಲಿ ಲಭ್ಯವಿರುವ ಮಾಹಿತಿಯಂತೆ ಹಾಗೂ ಪ್ರಾಂಶುಪಾಲರುಗಳ ಪ್ರಸ್ತಾವನೆಯ ಮೇರೆಗೆ ಅತಿಥಿ ಉಪನ್ಯಾಸಕರುಗಳಿಗೆ ಹಿಂದಿನ ಸಾಲುಗಳ ಕೊರತೆಯಾಗಿರುವ ಮಾಹೆ, ಮಾರ್ಚ್-2022 ರಿಂದ ಜುಲೈ-2022ರ ಮಾಹೆವರೆಗೆ ಗೌರವಧನಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿತ್ತು. ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಕೆಲವು ಕಾಲೇಜುಗಳ ಪ್ರಾಂಶುಪಾಲರುಗಳು ವೆಚ್ಚ ಮಾಡದೇ ಉಳಿಸಿಕೊಂಡಿರುವುದು ಕಂಡು ಬಂದಿರುತ್ತದೆ. ತಮ್ಮ ಹಂತದಲ್ಲಿ ಬಾಕಿ ಇರುವ ಅನುದಾನವನ್ನು ಕೊರತೆಯಾಗಿರುವ ಮಾಹೆಗಳಿಗೆ ವೆಚ್ಚ ಮಾಡಿ, ಉಳಿಕೆಯಾಗುವ ಅನುದಾನವನ್ನು ಆಗಸ್ಟ್-2022ರ ಮಾಹೆಗೆ ಬಳಸಿಕೊಳ್ಳುವ ಸಂಬಂಧ ಹಾಗೂ ಆಗಸ್ಟ್-2022ರ ಮಾಹೆಗೆ ಅವಶ್ಯಕವಾಗಿ ಬೇಕಾಗಿರುವ ವ್ಯತ್ಯಾಸದ ಗೌರವಧನದ ಮಾಹಿತಿಯನ್ನು ಈ ಕೆಳಕಂಡ ನಿಗಧಿತ ನಮೂನೆಯಲ್ಲಿ Excel Formatನಲ್ಲಿ ಸಾಫ್ಟ್‌ಕಾಫಿಯನ್ನು ಇ-ಮೇಲ್ ವಿಳಾಸ: dcegfbudget@gmail.comಕ್ಕೆ ದಿನಾಂಕ:26.08.2022ರೊಳಗೆ ಕಳುಹಿಸಿಕೊಡಲು ಸೂಚಿಸಿದೆ ಮತ್ತು ನಿಗಧಿತ ಅವಧಿಯ ನಂತರ ಬರುವ ಪ್ರಸ್ತಾವನೆಗಳನ್ನು ಸ್ವೀಕರಿಸುವುದಿಲ್ಲ ಹಾಗೂ ಗೌರವಧನವನ್ನು ವಿತರಿಸುವ ಸಂಬಂಧ ವಿಳಂಬವಾದಲ್ಲಿ ಪ್ರಾಂಶುಪಾಲರುಗಳೇ ನೇರ ಹೊಣೆಗಾರರಾಗಿರುತ್ತಾರೆ ಎಂಬ ಮಾಹಿತಿಯನ್ನು ಈ ಮೂಲಕ ತಿಳಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ನಮೂನೆ: ಪ್ರಾಂಶುಪಾಲರ ಹೆಸರು ಮತ್ತು ಮೊಬೈಲ್ ಸಂಖ್ಯೆ:

| ಕ್ರ. ಸಂ | ಕಾಲೇಜಿನ ಹೆಸರು | ಆಗಸ್ಟ್-2022ರ ಮಾಹೆಗೆ ಅವಶ್ಯಕವಾಗಿರುವ ಒಟ್ಟು ಅನುದಾನ | ತಮ್ಮ ಹಂತದಲ್ಲ ಉಳಿಕೆಯಾಗಿರುವ ಒಟ್ಟು ಅನುದಾನ | ಆಗಸ್ಟ್-2022ರ ಮಾಹಗೆ ಅವಶ್ಯಕವಾಗಿ ಬೇಕಾಗಿರುವ ವ್ಯತ್ಯಾಸದ ಮೊತ್ತ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| | | | | | |

**ಇವರಿಗೆ:**

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿಯನ್ನು:**

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರ್ಗಿ – 2021-22ನೇ ಸಾಲಿಗೆ ನೇಮಕಗೊಂಡಿರುವ ಅತಿಥಿ ಉಪನ್ಯಾಸಕರುಗಳಿಗೆ ಅನುಮೋದನೆಯನ್ನು ನೀಡುವ ಸಂಬಂಧ ಕಾಲೇಜುಗಳಿಂದ ಮಾಹಿತಿಯನ್ನು ಪಡೆದು ಅನುಮೋದನೆಯನ್ನು ನೀಡುವ ಸಂಬಂಧ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಲಾಗಿದೆ..
2. ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಸದರಿ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್ ಅಳವಡಿಸಲು ಸೂಕ್ತ ಕ್ರಮಕ್ಕಾಗಿ.
3. ಕಛೇರಿ ಪ್ರತಿ.